**ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಕೆ. ಆರ್. ಪುರಂ**

**O.S. No. 352/2025**
**PW: 1**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 19.11.2025**

**ಪಾಟೀ ಸವಾಲುಃ : 1 ನೇ ಪ್ರತಿವಾದಿ ಪರ ವಕೀಲರಾದ: ಉಮಾದೇವಿ.ಕೆ ರವರಿಂದ**

1. ದಾವಾ ಸ್ವತ್ತು ನನ್ನ ಮಾರಾಟಗಾರರಿಗೆ ದಿಃ 17.11.2003 ರ ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿ. ದಾವಾ ಸ್ವತ್ತುಗಳು ಸರ್ವೆ ನಂ. 37/1 ರಲ್ಲಿ ಬರುತ್ತವೆ. ನಿ.ಪಿ. 1 ರಲ್ಲಿ ನಿವೇಶನ ಸಂಖ್ಯೆಗಳನ್ನು ನಮೂದಿಸಿರುವುದಿಲ್ಲ ಕೇವಲ ಸರ್ವೆ ನಂಬರ್ ಗಳನ್ನು ನಮೂದಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳಿಗೆ ನಿವೇಶನ ಸಂಖ್ಯೆಗಳು ಇರುತ್ತವೆ ಎಂದು ತೋರಿಸಲು ನಾನು ಕ್ರಯ ಪತ್ರಗಳನ್ನು ಹಾಜರು ಪಡಿಸಿರುತ್ತೇನೆ ಸಾಕ್ಷಿ ಮುಂದುವರಿದು ನನ್ನ ಕ್ರಯ ಪತ್ರಗಳಿಗೆ 1 ನೇ ಪ್ರತಿವಾದಿ ಸಮ್ಮತಿ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ. 1 ವಿಭಾಗ ಪತ್ರದಂತೆ ಡಿ. ಆರ್ ಮಂಜುನಾಥ ರವರಿಗೆ ಐಟಂ ನಂ. 2 ಸರ್ವೆ ನಂ. 37/1 ರಲ್ಲಿ 38 ಗುಂಟೆ ಹಂಚಿಕೆಯಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಸದರಿಯವರಿಗೆ ಐಟಂ ನಂ. 3 ಸರ್ವೆ ನಂ. 37/1 ರಲ್ಲಿ 23 ಗುಂಟೆ ಹಂಚಿಕೆಯಾಗಿರುತ್ತದೆ ಎಂದರೆ ಸರಿ.

2. ನಿ.ಪಿ. 1 ವಿಭಾಗ ಪತ್ರದಂತೆ 1 ನೇ ಪ್ರತಿವಾದಿಗೆ ರವರಿಗೆ ಐಟಂ ನಂ. 2 ಸರ್ವೆ ನಂ. 37/1 ರಲ್ಲಿ 38 ಗುಂಟೆ ಹಂಚಿಕೆಯಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಸದರಿಯವರಿಗೆ ಐಟಂ ನಂ. 3 ಸರ್ವೆ ನಂ. 37/1 ರಲ್ಲಿ 23 ಗುಂಟೆ ಹಂಚಿಕೆಯಾಗಿರುತ್ತದೆ ಎಂದರೆ ಸರಿ. ನಾನು ಕ್ರಯಕ್ಕೆ ಪಡೆದಿರುವ ದಾವಾ ಸ್ವತ್ತು ನಿವೇಶನಗಳನ್ನು ಡಿ. ಆರ್ ಮಂಜುನಾಥ ಹಾಗೂ ಪ್ರತಿವಾದಿಗಳು ಅಭಿವೃದ್ಧಿ ಪಡಿಸಿರುತ್ತಾರೆ. ದಿಃ 07.11.2004 ರಂದು ಡಿ. ಆರ್ ಮಂಜುನಾಥ ಹಾಗೂ ಆತನ ತಂದೆ ಮತ್ತು 1 ನೇ ಪ್ರತಿವಾದಿ ಒಟ್ಟಿಗೆ 2 ನೇ ಪ್ರತಿವಾದಿಗೆ ನೊಂದಾಯಿತವಲ್ಲದ ಅಧಿಕಾರ ಪತ್ರವನ್ನು ಸರ್ವೆ ನಂ. 37/1 ಮತ್ತು ಸರ್ವೆ ನಂ. 42 ಜಮೀನುಗಳನ್ನು ಅಭಿವೃದ್ಧಿ ಪಡಿಸಿ ನಿವೇಶನಗಳನ್ನಾಗಿ ಪರಿವರ್ತಿಸಿ ಮಾರಾಟ ಮಾಡಲು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ದಾವಾ ಸ್ವತ್ತುಗಳನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ಡಿ. ಆರ್ ಮಂಜುನಾಥ ಹಾಗೂ ಪ್ರತಿವಾದಿಗಳನ್ನು ವಿಚಾರಿಸಿ ಕ್ರಯಕ್ಕೆ ಪಡೆದಿರುತ್ತೇನೆ.

3. ಸನ್ 2009 ನೇ ಸಾಲಿನಲ್ಲಿ ನಾನು ಪ್ರತಿವಾದಿಯ ಸ್ವತ್ತುಗಳಿಗೆ ಅಡ್ಡಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 1019/2009 ನೇದ್ದನ್ನು 1 ನೇ ಪ್ರತಿವಾದಿ ನನ್ನ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿರುವಾಗ 1 ನೇ ಪ್ರತಿವಾದಿ ಸರ್ವೆ ನಂ. 38/2 ರ ವಿಸ್ತೀರ್ಣ 36 ಗುಂಟೆ ಜಮೀನಿಗೆ ಸಂಬಂದಿಚಿಸಿದಂತೆ ಪೋಡಿಗಾಗಿ ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಗೆ ನಾನು ತಕರಾರು ಸಲ್ಲಿಸಿರುತ್ತೇನೆ

ಎಂದರೆ ಸರಿ. ಸದರಿ ಅರ್ಜಿಯ ಅನುಗುಣವಾಗಿ ತಹಶೀಲ್ದಾರ್ ರವರು ಮೋಜಣಿ ಮಾಡಿ ನಕ್ಷೆಯನ್ನು ತಯಾರಿಸಿ ಸದರಿ ನಕ್ಷೆಯಲ್ಲಿ ನಾನು ಸರ್ವೆ ನಂ. 38/2 ರಲ್ಲಿ ಬ್ಲಾಕ್ ನಂ. 2 ರಲ್ಲಿ 5.1/4 ಗುಂಟೆ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸಲ್ಲಿಸಿದ ಫೋಡಿ ಅರ್ಜಿಗೆ ನಾನು ನನ್ನ ತಕರಾರಿನೊಂದಿಗೆ ನನ್ನ ಕ್ರಯ ಪತ್ರಗಳನ್ನು ಹಾಜರುಪಡಿಸಿದ್ದೆ ಎಂದರೆ ಸರಿ. ನಾನು ಸಲ್ಲಿಸಿದ ಕ್ರಯ ಪತ್ರಗಳು ಹಾಗೂ ದಾವಾ ಸ್ವತ್ತುಗಳು ಸರ್ವೆ ಸಂಖ್ಯೆ 37/1 ಕ್ಕೆ ಸಂಬಂಧಿಸಿರುತ್ತವೆ ಎಂದರೆ ಸರಿ. 1 ನೇ ಪ್ರತಿವಾದಿ ಕೇವಲ ಸರ್ವೆ ನಂ. 38/2 ಕ್ಕೆ ಮಾತ್ರ ಫೋಡಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ತಹಶೀಲ್ದಾರ್ ರವರು ನನಗೆ ನನ್ನ ಪ್ರಕರಣವನ್ನು ಪ್ರಸ್ತುತ ಪಡಿಸಲು ಅವಕಾಶ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ತಹಶೀಲ್ದಾರ್ ರವರು ಸದರಿ ಫೋಡಿ ಅರ್ಜಿಯ ಮೇಲೆ ಆದೇಶವನ್ನು ಹೊರಡಿಸಿ ಸದರಿ ಆದೇಶದಲ್ಲಿ ನಾನು ಖಾತೆದಾರನಾಗಿರುವುದಿಲ್ಲ ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ನನ್ನ ಕ್ರಯ ಪತ್ರಕ್ಕೆ 2 ನೇ ಪ್ರತಿವಾದಿ ಹಾಗೂ ಫದರ್ ಜೆರಾಲ್ಡ್ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಇಬ್ಬರು ಸಾಕ್ಷಿದಾರರು ನನ್ನ ಪರವಾಗಿ ಸಹಿ ಮಾಡಿರುತ್ತಾರೇ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನನ್ನ ಮಾರಾಟಗಾರರ ಪರವಾಗಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿಯೇ ನನಗೆ 2 ನೇ ಪ್ರತಿವಾದಿಯ ಪರಿಚಯ ಇರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿಯ ಮೂಲಕನೇ ನಾನು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಮಾರಾಟಗಾರರು ಹಾಗೂ ಈ ದಾವೆಯ ಪ್ರತಿವಾದಿಗಳು ಒಟ್ಟಿಗೆ ವ್ಯವಹಾರವನ್ನು ಮಾಡುತ್ತಾರೆ ಎಂದು ನುಡಿಯುತ್ತಾರೆ.

5. ನಾನು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿಯೇ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಸರ್ವೆ ನಂ. 37/1 ಕ್ಕೆ ಸಂಬಂದಿಸಿದಂತೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ಸಾಕ್ಷಿ ಮುಂದುವರಿದು ಭವಿಷ್ಯದಲ್ಲಿ ಯಾವುದೇ ತೊಂದರೆ ಯಾಗಬಾರದೆಂಬ ಉದ್ದೇಶದಿಂದ ನಾನು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ಪ್ರತಿವಾದಿಗಳ ಸಹಿಯನ್ನು ಸಾಕ್ಷಿದಾರರನ್ನಾಗಿ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ಕ್ರಯ ಪತ್ರಕ್ಕೆ ಆಂಜಿನಪ್ಪನ ಸಹಿಯನ್ನು ಪಡೆದಿರುವುದಿಲ್ಲ ಹಾಗೂ ಅದರ ಅವಶ್ಯಕತೆ ನನಗೆ ಇರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲಾತಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲಾತಿಯನ್ನು **ನಿ.ಡಿ. 1** ಎಂದು ಗುರುತಿಸಲಾಯಿತು. ನಿ.ಡಿ. 1 ರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ನನ್ನ ಗಮನಕ್ಕೆ ಇರುತ್ತವೆ ಎಂದರೆ ಸರಿ.

6. ಸರ್ವೆ ನಂ. 38/2 ವಿಸ್ತೀರ್ಣ 36 ಗುಂಟೆ ಜಮೀನು 1ನೇ ಪ್ರತಿವಾದಿಯ ಮಾಲೀಕತ್ವದಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 1ನೇ ಪ್ರತಿವಾದಿ ಸದರಿ ಸ್ವತ್ತನ್ನು ಮುನಿನಂಜಪ್ಪ ರವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು 1ನೇ ಪ್ರತಿವಾದಿ ಯಾರಿಗೂ ಮಾರಾಟ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತುಗಳ ಒಟ್ಟು ವಿಸ್ತೀರ್ಣ 160 x 100 ಚದರ ಅಡಿ ಇರುತ್ತವೆ. 4 ನಿವೇಶನಗಳಿಗೆ ನಿ.ಪಿ. 2 ರಲ್ಲಿ ಒಂದೇ ಚೆಕ್ಕುಬಂದಿಯನ್ನು ನಮೂದಿಸಿರುತ್ತೇನೆ. ಬಡಾವಣೆ ನಕ್ಷೆಯನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ಕ್ರಯಕ್ಕೆ ಪಡೆದಿರುವ ನಿವೇನಶಗಳು ವಸತಿ ಎಂದು ಪರಿವರ್ತನೆಯಾಗಿರುವುದಿಲ್ಲ ಸಾಕ್ಷಿ ಮುಂದುವರಿದು ನಾನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ಯಾವುದೇ ಕೃಷಿ ಚಟುವಟಿಕೆ ನಡೆಯುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಕ್ರಯಕ್ಕೆ ಪಡೆದಿರುವ ದಾವಾ ಸ್ವತ್ತುಗಳನ್ನು 2 ನೇ ಪ್ರತಿವಾದಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮಾರಾಟಗಾರ ಹಾಗೂ ಪ್ರತಿವಾದಿಗಳು ಒಟ್ಟಾಗಿ ನನಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಕ್ರಯಕ್ಕೆ ಪಡೆದ ನಂತರ ತಕ್ಷಣ ನನ್ನ ಹೆಸರಿಗೆ ಪಂಚಾಯಿತಿಯಲ್ಲಿ ಖಾತೆಯನ್ನು ಮಾಡಿಸಿರುತ್ತೇನೆ. ನಿ.ಪಿ. 27 ರಂತೆ ನಾನು ಮನೆಯನ್ನು ನಿರ್ಮಿಸಲು ಕಣ್ಣೂರು ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆದಿರುತ್ತೇನೆ. ಪ್ರತಿವಾದಿಗಳು ಹಾಗೂ ಅವರ ಕುಟುಂಬದವರು ಬಡಾವಣೆ ನಿರ್ಮಾಣ ಮಾಡಿ ಅಭಿವೃದ್ಧಿ ಪಡಿಸಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಹಾಗೂ ಪ್ರತಿವಾದಿಗಳ ಮಧ್ಯ ಯಾವುದೇ ದಾವೆಗಳು ವಿಚಾರಣೆ ಹಂತದಲ್ಲಿರುವುದಿಲ್ಲ.

7. 1ನೇ ಪ್ರತಿವಾದಿ ನನ್ನ ವಿರುದ್ಧ ಅಸಲು ದಾವಾ ಸಂಖ್ಯೆ 1704/2014 ನೇದ್ದನ್ನು ಸಲ್ಲಿಸಿದ್ದರು ಹಾಗೂ ನಾನು ಸದರಿ ದಾವೆಯಲ್ಲಿ ಹಾಜರಾಗಿ ಲಿಖಿತ ಹೇಳಿಕೆ ಸಲ್ಲಿಸಿರುತ್ತೇನೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಸದರಿ ದಾವೆಯು ದಾವಾ ಸ್ವತ್ತಿಗೆ ಸಂಬಂಧಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಸರ್ವೆ ನಂ. 38/2 ರ 36 ಗುಂಟೆ ಯಲ್ಲಿ 5.1/4 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತೇನೆ ಎಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ದಾವಾ ಸ್ವತ್ತುಗಳು ಸರ್ವೆ ನಂ. 38/2 ರಲ್ಲಿ ಬರುತ್ತವೆ ಎಂದರೆ ಸರಿಯಲ್ಲ.

**ಕೋರಿಕೆ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ**

**ದಿವಾಣಿ ಮತ್ತು ಪ್ರಥಮ ದರ್ಜೆನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಕೆ. ಆರ್. ಪುರಂ**